\- - ಅಸಲು ದಾವೆ ಸಂ: **78/2022.** ಪಿ.ಡಬ್ಲು **- 3**

**ದಿ: 22-08-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ವಿ.ಎಮ್.ಎಮ್. ವಕೀಲರಿಂದ: -**

1. ಈ ದಾವೆಯನ್ನು ಹನುಮಂತಿ ನಾಗಪ್ಪ ಇವರು ಯಂಕಮ್ಮ ಇವರ ಮೇಲೆ ಹೊಲದ ಸಲುವಾಗಿ ಮಾಡಿರುತ್ತಾರೆ. ದಾವಾ ಹೊಲದ ಸ ನಂ 5 ಇರುತ್ತದೆ. ಅದರ ವಿಸ್ತೀರ್ಣ ಒಂದು 20 ಗುಂಟೆ ಮತ್ತು

ಇನ್ನೊಂದು 14 ಗುಂಟೆ ಇರುತ್ತದೆ. ದಾವಾ ಹೊಲಗಳು ಯಂಕಮ್ಮಳ ಹೆಸರಲೇ ಇರುತ್ತವೆ. ಸದ್ಯ ಪಹಣಿಗಳು ಯಂಕಮ್ಮಳ ಹೆಸರಲೇ ಇರುತ್ತದೆ. ದಾವಾ ಹೊಲದ ಚಕ್‌ಬಂದಿ ಪೂರ್ವ ದಿಕ್ಕಿಗೆ ರಂಗಪ್ಪ ನ ಹೊಲ, ಪಶ್ಚಿಮ ದಿಕ್ಕಿಗೆ ವಾದಿ ನಾಗಪ್ಪ ಮತ್ತು ಹನುಮಂತಿ ಇವರ ಹೊಲ ಇದೆ. ಸಾಕ್ಷಿಯು ವಾದಿಯ ಹೊಲದ ಸ ನಂ 5 ಆಗಿರುತ್ತದೆ ಎನ್ನುತ್ತಾರೆ. ಅದರ ವಿಸ್ತೀರ್ಣ 03-00 ಎಕರೆ ಇರುತ್ತದೆ. ಆ 3-00 ಎಕರೆ ಹೊಲ ಹನುಮಂತಿ ನಾಗಪ್ಪ ಇವರ ಹೆಸರಲೇ ಇದೆ. ಆ 3-00 ಎಕರೆ ಹೊಲ ಅವರಿಗೆ ಭಾಗದಲ್ಲಿ ಬಂದಿರುತ್ತದೆ. ಆ 3-00 ಎಕರೆ ಹೊಲ ಭಾಗ ಆಗಿಲ್ಲ.

2. 1ನೇ ವಾದಿ ಹನುಮಂತಿ ತಂದೆಯ ಹೆಸರು ಮಾನಶೆಯ್ಯ ಆಗಿದ್ದು ಗಂಡನ ಹೆಸರು ಕರಿಯಪ್ಪ ಆಗಿರುತ್ತದೆ. ಸದರಿ ಕರಿಯಪ್ಪನ ತಂದೆಯ ಹೆಸರು ಶಿವರಾಯ ಆಗಿರುತ್ತದೆ, ಸದರಿ ಶಿವರಾಯನ ತಂದೆಯ ಹೆಸರು ನಾಗಪ್ಪ ಆಗಿರುತ್ತದೆ. ಶಿವರಾಯನಿಗೆ 04 ಜನ ಮಕ್ಕಳು ಇರುತ್ತಾರೆ. ಅವರ ಹೆಸರು 2 ರಿಂದ 4 ನೇ ವಾದಿಯರು ಮತ್ತು 1ನೇ ವಾದಿಯ ಗಂಡ ಕರಿಯಪ್ಪ ಆಗಿರುತ್ತಾರೆ. ಶಿವರಾಯನ ತಂದೆ ನಾಗಪ್ಪನಿಗೆ ಇಬ್ಬರು ಮಕ್ಕಳು ಅವರ ಹೆಸರು ಶಿವರಾಯ ಮತ್ತು ಮಾನಶೆಯ್ಯ ಆಗಿರುತ್ತದೆ. 1ನೇ ಪ್ರತಿವಾದಿ ಯಂಕಮ್ಮ ಳ ತಂದೆಯ ಹೆಸರು ವೆಂಕಟಗಿರಿ ಆಗಿರುತ್ತದೆ ತಾಯಿಯ ಹೆಸರು ಭೀಮವ್ವ ಆಗಿರುತ್ತದೆ. 1ನೇ ಪ್ರತಿವಾದಿಯ ತಂದೆಯಾದ ವೆಂಕಟಗಿರಿಗೆ ಹನುಮಯ್ಯ ಮತ್ತು ನಾಗಪ್ಪ ಇಬ್ಬರು ಸಹೋದರರು ಎಂದರೆ ಸರಿ. ಹನುಮಯ್ಯ, ನಾಗಪ್ಪ ಮತ್ತು ವೆಂಕಟಗಿರಿ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಬಹಳ ವರ್ಷಗಳಿಂದೆ ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಅವರು ಜೀವಂತ ಇರುವ ಕಾಲಕ್ಕೆ ಬೇರೆ ಆಗಿರಲಿಲ್ಲ. ಅವರಿಗೆ ಒಟ್ಟು ಆಸ್ತಿ ಎಷ್ಟು ಇತ್ತು ಎಂದರೆ ಸಾಕ್ಷಿಯು ಒಬ್ಬೊಬ್ಬರಿಗೆ 3-00 ಎಕರೆ ಒಟ್ಟು 9-00 ಎಕರೆ ಇತ್ತು ಎನ್ನುತ್ತಾರೆ. ಆ 3-00, 3-00 ಎಕರೆ ಯಾರ ಯಾರ ಹೆಸರಲೇ ಆಗಿದೆ ಎಂದರೆ ಸಾಕ್ಷಿಯು ವೆಂಕಟಗಿರಿ ಹೆಸರಲೇ 3-00 ಎಕರೆ, ಮಾನಶೆಯ್ಯ ಹೆಸರಿಗೆ 3-00 ಎಕರೆ, ಹನುಮಯ್ಯನ ಹೆಸರಿಗೆ 3-00 ಎಕರೆ ಆಗಿರುತ್ತದೆ ಎನ್ನುತ್ತಾರೆ. ಈ ದಾವೆಯ ನಾಗಪ್ಪ ಮತ್ತು

ಹನುಮಯ್ಯ ಇವರ ಹೆಸರಲೇ ಇರುವ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿದ್ದಾರೆಯೇ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈ ರೀತಿ ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಯಾರು ಹೇಳಿಲ್ಲ ನನಗೆ ಗೊತ್ತಿದೆ ಎನ್ನುತ್ತಾರೆ. ಈ ವಿಚಾರವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸಾಕ್ಷಿಗೆ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹನುಮಯ್ಯ ಮತ್ತು ನಾಗಪ್ಪ ಇವರ ಹೆಸರಲೇ ಇರುವ 3-00 ಎಕರೆ 3-00 ಎಕರೆ ಜಮಿನುಗಳು ಸೇರಿಸಿಲ್ಲ ಎಂದರೆ ಅವರು ದಡ್ಡರು ಇದ್ದಾರೆ ಸೇರಿಸಿಲ್ಲ ಎನ್ನುತ್ತಾರೆ.

3. ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ಹೆಸರಿಗೆ ಒಬ್ಬರೆ ವಾರಸುದಾರರು ಇದ್ದಾರೆ ಎಂದು ವೆಂಕಟಗಿರಿ ಮಾಡಿಸಿರುತ್ತಾರೆ. 1ನೇ ಪ್ರತಿವಾದಿ ತಂದೆ ಜೀವಂತ ಇದ್ದ ಕಾಲಕ್ಕೆ ಅವರು ಮಾಲೀಕರು ಮತ್ತು ಕಬ್ಜಾದಾರರು ಇದ್ದರು ಎಂದರೆ ಸರಿ. 1ನೇ ಪ್ರತಿವಾದಿಯ ತಾಯಿ ಭೀಮವ್ವ 20 ವರ್ಷಗಳಿಂದೆ ತೀರಿಕೊಂಡಿರುತ್ತಾಳೆ. ದಾವಾ ಆಸ್ತಿ ಯಂಕಮ್ಮ ಮತ್ತು ಭೀಮವ್ವ ಇವರ ಕಬ್ಜಾದಲ್ಲಿತ್ತು ಎಂದರೆ ಸರಿ. ಭೀಮವ್ವ ತೀರಿಕೊಂಡ ನಂತರ ಯಂಕಮ್ಮ ಇವರ ಕಬ್ಜಾದಲ್ಲಿತ್ತು ಎಂದರೆ ಸರಿ. ಯಂಕಮ್ಮ ದಾವಾ ಆಸ್ತಿಯ ಮಾಲೀಕರು ಮತ್ತು ಹಕ್ಕುದಾರಳಾಗಿರುವುದರಿಂದ ಮಾರಾಟ ಮಾಡುವ ಹಕ್ಕು ಇತ್ತು ಎಂದರೆ ಸರಿ ಆದರೆ ಅವರು ಮಾರಾಟ ಮಾಡಿಲ್ಲ ಎನ್ನುತ್ತಾರೆ. ದಿನಾಂಕ: 27-09-2022 ರಂದು 1ನೇ ಪ್ರತಿವಾದಿ ದಾವಾ ಆಸ್ತಿ 2ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದ ಕಾರಣ ಮಾರಾಟ ಮಾಡಿದ್ದಾರೆ ಎಂದರೆ ಮಾರಾಟ ಮಾಡಿಲ್ಲ ಎನ್ನುತ್ತಾರೆ. ದೇವದುರ್ಗ ಉಪನೋಂದಣಿ ಕಚೇರಿಯಲ್ಲಿ ಖರೀದಿ ನೋಂದಣಿ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ ಎನ್ನುತ್ತಾರೆ. ಮಾರಾಟ ಮಾಡಿದ ಮೇಲೆ 2ನೇ ಪ್ರತಿವಾದಿಯ ಹೆಸರಿಗೆ ಪಹಣಿಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾಡಿಲ್ಲ ಅವರು ಗೊತ್ತಿಲ್ಲದಂತೆ ಮಾಡಿರುತ್ತಾರೆ ಎನ್ನುತ್ತಾರೆ. 2022 ರ ನಂತರ 2ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕಳು ಮತ್ತು ಹಕ್ಕುದಾರಳು ಆಗಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ರೀತಿ ಹಕ್ಕು ಮತ್ತು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ 2ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಮತ್ತು ಅವರ ಹೆಸರಿಗೆ ಪಹಣಿ ಬಂದಿರುವುದು ನಿಮಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

4. ಹನುಮಯ್ಯ, ನಾಗಪ್ಪ ಮತ್ತು ವೆಂಕಟಗಿರಿ ಇವರು ಜೀವಂತ ಇದ್ದಾಗ ಮೌಖಿಕವಾಗಿ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮಾಡಿಕೊಂಡಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ವಿಭಾಗದ ಪ್ರಕಾರ ವ ವೆಂಕಟಗಿರಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 20 ಗುಂಟೆ ಮತ್ತು 14 ಗುಂಟೆ ಬಿಟ್ಟು ಉಳಿದ ಜಮೀನಲ್ಲಿ ಅರ್ಧ ಕೆನಾಲ್ ಗೆ ಹೋಗಿದೆ. ಆ ಕೆನಾಲ್ ಗೆ ಹೋಗಿದ್ದ ಪರಿಹಾರ ಹಣವನ್ನು ಯಂಕಮ್ಮ ಪಡೆದುಕೊಂಡಿದ್ದಾಳೆ. ಯಂಕಮ್ಮಳ ಹೆಸರಲೇ ಪಹಣಿ ಇತ್ತು ಆದ್ದರಿಂದ ಪರಿಹಾರ ಆಕೆ ಪಡೆದುಕೊಂಡಿದ್ದಾಳೆಂದರೆ ಸರಿ. ಪರಿಹಾರ ಹಣ ಪಡೆದುಕೊಂಡು 20 ವರ್ಷ ಆಗಿರುತ್ತದೆ. ವಾದಿಯರು ಯಂಕಮ್ಮ ಪರಿಹಾರ ಹಣ ಪಡೆದುಕೊಂಡ ಬಗ್ಗೆ ತಕರಾರು ಮಾಡಿರುವುದಿಲ್ಲ. ವಾದಿಯರು ನನಗೆ ಸಂಬಂಧಿಕರಲ್ಲ ಆದರೆ ನನ್ನ ಹೊಲದ ಪಕ್ಕದವರಾಗಿರುತ್ತಾರೆ. ನನ್ನ ಗಂಡನ ಹೆಸರು ರಾಮಯ್ಯ ಅವರ ತಂದೆಯ ಹೆಸರು ಶಿವರಾಯ. 1ನೇ ವಾದಿ ಹನುಮಂತಿ ನಿಮಗೆ ತಂಗಿಯಾಗಬೇಕೆಂದರೆ ಸರಿಯಲ್ಲ. 1ನೇ ವಾದಿಯ ತಂದೆಯ ಹೆಸರು ಮಾನಶೇಯ್ಯ ಆಗಿರುತ್ತದೆ. ವಾದಿಯರು ನಿಮಗೆ ಸಂಬಂಧಿಕರಾಗುವ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ